2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 145/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - ಚಂದ್ರ | | ಪಿಡಬ್ಲೂ - 20 |
| ತಂದೆಯ ಹೆಸರು | - ದಿಡಗಯ್ಯ | | ಸಿಡಬ್ಲೂ - 40 |
| ವಯಸ್ಸು | - 39 ವರ್ಷ | | |
| ಉದ್ಯೋಗ | - ಕಿರಿಯ ಇಂಜಿನಿಯರ್ | | |
| ವಾಸ ಸ್ಥಳ | - ಹಾಸನ | | |

ದಿನಾಂಕಃ 24-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕ 05.09.2019 ರಿಂದ 29.11.2022 ರವರೆಗೆ ಚಿಕ್ಕಮಗಳೂರಿನ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದಲ್ಲಿ ಕಿರಿಯ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 27.10.2019 ರಂದು ಚಿಕ್ಕಮಗಳೂರು ಗ್ರಾಮಾಂತರ ವೃತ್ತ ನಿರೀಕ್ಷಕರು ರವರು ಚಿಕ್ಕಮಗಳೂರು ಮೆಸ್ಕಾಂನ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ ಮನವಿಯನ್ನು ಸಲ್ಲಿಸಿ ಜೋಳ್ ದಾಳ್ ಪಾಳ್ಯದಲ್ಲಿರುವ ಎಂ ಬಿ ಸುಧೀರ್ ಎಂಬುವವರಿಗೆ ಸೇರಿದ ಕಾಫಿ ತೋಟದ ಕೂಲಿ ಲೈನ್ ನ ಮನೆಯಲ್ಲಿ ಕೃತ್ಯ ನಡೆದಿದ್ದಾಗಿ ಮತ್ತು ಸದರಿ ಸ್ಥಳದಲ್ಲಿ ಕೃತ್ಯ ನಡೆದ ಸಮಯದಲ್ಲಿ ವಿದ್ಯುತ್ ಸಂಪರ್ಕವಿತ್ತೇ ಇಲ್ಲವೇ ಎಂದು ವರದಿ ನೀಡಲು ಕೋರಲಾಗಿತ್ತು. ಸದರಿ ಮನವಿಯನ್ನು ದಿನಾಂಕ 28.10.2019 ರಂದು ನಮ್ಮ ಕಚೇರಿಯಲ್ಲಿ ಸ್ವೀಕರಿಸಲಾಗಿರುತ್ತದೆ. ಸದರಿ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ.73 ಎಂದು ಗುರುತಿಸಲಾಯಿತು.

ಸದರಿ ಮನವಿಯಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ದಿನಾಂಕ 03.08.2019 ರ ಮಧ್ಯ ರಾತ್ರಿ 12.00 ಗಂಟೆ ಸಮಯದಿಂದ ದಿನಾಂಕ 04.08.2019 ರ ಮಧ್ಯ ರಾತ್ರಿ 2.00 ಗಂಟೆಯವರೆಗೆ ವಿದ್ಯುತ್ ಪೂರೈಕೆಯಾಗಿರುವ ಬಗ್ಗೆ ವರದಿಯನ್ನು ನೀಡುವಂತೆ ಕೋರಲಾಗಿತ್ತು.

3. ಸದರಿ ಮನವಿಯ ಮೇರೆಗೆ ದಿನಾಂಕ 10.11.2019 ರಂದು ನಾನು ಸದರಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ದಿನಾಂಕ 03.08.2019 ರ ಮಧ್ಯ ರಾತ್ರಿ 12.00 ಗಂಟೆ ಸಮಯದಿಂದ ದಿನಾಂಕ 04.08.2019 ರ ಮಧ್ಯ ರಾತ್ರಿ 2.00 ಗಂಟೆಯವರೆಗೆ ಸದರಿ ಗ್ರಾಮಕ್ಕೆ ವಿದ್ಯುತ್ ಪೂರೈಕೆ ಮಾಡುವ ಚಿಕ್ಕಮಗಳೂರು 66/11 ಕೆ ವಿ ವಿವಿ ಕೇಂದ್ರದಿಂದ ಹೊರಹೊಮ್ಮುವ 11 ಕೆ ವಿ ಮಲ್ಲಂದೂರು ಫೀಡರ್ ಚಾರ್ಜ್‌ನಲ್ಲಿರುವುದು ಕಂಡು ಬಂದಿರುತ್ತದೆ. ಸದರಿ ಅವಧಿಯಲ್ಲಿ ಸದರಿ ಭಾಗದ ಗ್ರಾಹಕರಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ. ಆ ಬಗ್ಗೆ ನಾನು ನಮ್ಮ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಆದ ಕಾರ್ತಿಕ್ ಜೆ ರವರಿಗೆ ಅದೇ ದಿನ ಅಂದರೆ ದಿನಾಂಕ 10.11.2019 ರಂದು ಮೌಖಿಕವಾಗಿ ವರದಿ ಸಲ್ಲಿಸಿರುತ್ತೇನೆ. ಸದರಿ ವರದಿಯ ಆಧಾರದ ಮೇರೆಗೆ ನಮ್ಮ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಆದ ಕಾರ್ತಿಕ್ ಜೆ ರವರು ದಿನಾಂಕ 11.11.2019 ರಂದು ಚಿಕ್ಕಮಗಳೂರು ಗ್ರಾಮಾಂತರ ವೃತ್ತ ನಿರೀಕ್ಷಕರಿಗೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು

ನೋಡುತ್ತಿದ್ದು ಅದನ್ನು ನಿಪಿ.74 ಎಂದು ಗುರುತಿಸಲಾಯಿತು.

4. ನಾನು ಮೇಲೆ ಹೇಳಿದಂತೆ ವರದಿ ನೀಡುವ ಮೊದಲು ಚಿಕ್ಕಮಗಳೂರು 66/11 ಕೆ ವಿ ವಿವಿ ಕೇಂದ್ರದ ಲಾಗ್ ಪುಸ್ತಕವನ್ನು ಪರಿಶೀಲಿಸಿ ವರದಿಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದ – ಆರೋಪಿ ಪರವಾಗಿ</u>

5. ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಸುಧೀರ್ ರವರ ಹೆಸರಿನಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳಲಾಗಿತ್ತು. ಸದರಿ ಸುಧೀರ್ ರವರನ್ನು ನಾನು ವಿಚಾರಿಸಿಲ್ಲ. ನೀವು ಹೇಳಿದಂತೆ ದಿನಾಂಕ 10.11.2019 ರಂದು ನೀವು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಗ್ಗೆ ನಿಪಿ.74 ರಲ್ಲಿ ನಮೂದಿಸಲಾಗಿಲ್ಲ ಎಂದರೆ ಸರಿ. ನಿಪಿ.74 ವರದಿಯನ್ನು ನೀವು ನೀಡಿಲ್ಲ ಎಂದರೆ ಸರಿ. ಯಾವುದೇ ಕಟ್ಟಡದ ವಿದ್ಯುತ್ ಸಂಪರ್ಕ ಕಡಿತವಾದರೆ ಆ ಬಗ್ಗೆ ದೂರು ದಾಖಲಾಗದ ಹೊರತು ನಿಮಗೆ ತಿಳಿದು ಬರುವುದಿಲ್ಲ ಎಂದರೆ ಸರಿ.

6. ನಿಮ್ಮ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವಂತೆ ನಿಮಗೆ ಲಿಖಿತವಾಗಿ ಆದೇಶಿಸಿದ್ದರೇ ಎಂದರೆ ಸಾಕ್ಷಿ ಇಲ್ಲ ಮೌಖಿಕವಾಗಿ ಸೂಚಿಸಿದ್ದರು ಎನ್ನುತ್ತಾರೆ. ಸುಧೀರ್ ರವರ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ ಏನು ಘಟನೆ ನಡೆದಿತ್ತು ಎಂದು ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನೀವು ಹೇಳಿದಂತೆ ಯಾವುದೇ ಸ್ಥಳಕ್ಕೆ ಭೇಟಿ ನೀಡಿಲ್ಲ ಮತ್ತು ಯಾವುದೇ ಮಾಹಿತಿಯನ್ನು ಸಂಗ್ರಹಿಸಿಲ್ಲ ಮತ್ತು ಆ ಬಗ್ಗೆ ಸಹಾಯಕ ಕಾರ್ಯ ನಿರ್ವಾಹಕ

ಇಂಜಿನಿಯರ್ ರವರಿಗೆ ಯಾವುದೇ ವರದಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.